**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019-20

ನಿರ್ದೇಶಕರ ಕಾರ್ಯಾಲಯ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 24-04-2019.

# ಜ್ಞಾಪನ

ವಿಷಯ: C-15 ಡಿಪ್ಲೊಮಾ ಪಠ್ಯಕ್ರಮದ ವಿವಿಧ ಪ್ರೋಗ್ರಾಂಗಳಲ್ಲಿರುವ ಕೋರ್ಸುಗಳ CO's ಮತ್ತು ಪಠ್ಯವಿಷಯಗಳ ಬಗ್ಗೆ ಉಪನ್ಯಾಸಕರು /ವಿಷಯ ತಜ್ಞರು / ಪ್ರಸಕ್ತ ಅಂತಿಮ ವರ್ಷದ ಮತ್ತು ಹಳೆವಿದ್ಯಾರ್ಥಿಗಳು / ಔದ್ಯೋಗಿಕ ಕ್ಷೇತ್ರಗಳ ಪರಿಣಿತರಿಂದ ಅಭಿಪ್ರಾಯಗಳನ್ನು ಕ್ರೋಡೀಕರಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿನಿಂದ ಡಿಪ್ಲೊಮಾ ಪ್ರೋಗ್ರಾಂಗಳಲ್ಲಿ C-15 ಪಠ್ಯಕ್ರಮಗಳನ್ನು ಭೋದಿಸಲಾಗುತ್ತಿದೆ. ಸದರಿ ಪಠ್ಯಕ್ರಮದ ವಿವಿಧ ಪ್ರೋಗ್ರಾಂಗಳಲ್ಲಿರುವ ಕೋರ್ಸುಗಳ CO's ಮತ್ತು ಪಠ್ಯವಿಷಯಗಳನ್ನು ಪ್ರಸಕ್ತ ಕೈಗಾರಿಕಾ / ಉದ್ದಿಮೆಗಳ ಮತ್ತು ಉದ್ಯೋಗಾವಕಾಶಗಳ ಅವಶ್ಯಕತೆಗಳಿಗುಣವಾಗಿ ಪರಿಷ್ಕರಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಸಕ್ತ ಚಾಲ್ತಿಯಲ್ಲಿರುವ C-15 ಪಠ್ಯಕ್ರಮಗಳ ವಿವಿಧ ಪ್ರೋಗ್ರಾಂಗಳ CO's ಮತ್ತು ಪಠ್ಯವಿಷಯಗಳ ಬಗ್ಗೆ ಉಪನ್ಯಾಸಕರು / ವಿಷಯ ತಜ್ಞರು / ಪ್ರಸಕ್ತ ಅಂತಿಮ ವರ್ಷದ ಮತ್ತು ಹಳೆ ವಿದ್ಯಾರ್ಥಿಗಳು / ಔದ್ಯೋಗಿಕ ಕ್ಷೇತ್ರಗಳ ಪರಿಣಿತರಿಂದ ಅಭಿಪ್ರಾಯಗಳನ್ನು ಪಡೆದು ಪಠ್ಯಕ್ರಮಗಳನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ.

ಆದ್ದರಿಂದ ಸಂಸ್ಥೆಯಲ್ಲಿರುವ ಆಯಾಯ ಪ್ರೊಗ್ರಾಂಗಳ ವಿಭಾಗಾಧಿಕಾರಿಗಳು ಎಲ್ಲಾ ಉಪನ್ಯಾಸಕರ / ಪ್ರಸಕ್ತ ಅಂತಿಮ ವರ್ಷದ ಮತ್ತು ಹಳೆವಿದ್ಯಾರ್ಥಿಗಳು / ಔದ್ಯೋಗಿಕ ಕ್ಷೇತ್ರಗಳ ಪರಿಣಿತರಿಂದ C-15 ಪಠ್ಯಕ್ರಮಗಳ ಕೋರ್ಸುಗಳಲ್ಲಿರುವ CO's ಮತ್ತು ಪಠ್ಯವಿಷಯಗಳ ಬಗ್ಗೆ ಪ್ರತ್ಯೇಕವಾಗಿ ಸಕಾರಾತ್ಮಕ ಅಭಿಪ್ರಾಯಗಳನ್ನು 31/08/2019ರ ಒಳಗಾಗಿ ಈ ಕೆಳಕಂಡ ಗೂಗಲ್ ಫೋರ್ಮ್ ಲಿಂಕ್ ಮುಖಾಂತರ ಸಲ್ಲಿಸಲು ಸೂಚಿಸಿದೆ.

https://forms.gle/7CHqKvFgoL972SnM7

ಸದರಿ ವಿಷಯವಾಗಿ ಪ್ರಾಚಾರ್ಯರು/ಸಂಸ್ಥೆಯ ಹಳೆ ವಿದ್ಯಾರ್ಥಿ ಸಂಘ / ಇಂಡಸ್ಟ್ರಿ ಇನ್‌ಸ್ಟಿಟ್ಯೂಟ್ ಇಂಟರಾಕ್ಷನ್ ಸೆಲ್‌ಗಳ ಸಭೆ ಕರೆದು ಸಕಾರಾತ್ಮಕ ಅಭಿಪ್ರಾಯಗಳನ್ನು ನಿಗಧಿತ ದಿನಾಂಕದ ಒಳಗೆ ಸಲ್ಲಿಸಲು ಸೂಕ್ತ ಕ್ರಮ ವಹಿಸುವಂತೆ ನಿರ್ದೇಶಿಸಲಾಗಿದೆ.

ನಿರ್ದೇಶಕರು

ಗೆ:

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ: ಸೂಕ್ತ ಕ್ರಮಕ್ಕಾಗಿ.

ಪ್ರತಿ: ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂ., ಇವರಿಗೆ ಇಲಾಖಾ ವೆಬ್‌ಸೈಟನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.